OS No. 61/2022

PW-5

**(ಇಂದು ದಿಃ 13-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲು ಃ- ಶ್ರೀ. ಎಮ್ ಎ ಜೆ ವಕೀಲರಿಂದಃ-**

ವಾದಿ ಮತ್ತು ಅವರ ಅಣ್ಣ ಬುಗಯ್ಯ ರವರಿಗೆ ಅವರ ಹಿರಿಯರಿವರಿಂದ ಆರುವರೆ ಎಕರೆ ಜಮೀನು ಬಂದಿತ್ತು. ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ವಾದಿ ಮತ್ತು ಬುಗಯ್ಯ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸದರಿ ಸರ್ವೆ ನಂಬರನ ದಾಖಲಾತಿ ನೋಡಿಲ್ಲ. ಅದರಲ್ಲಿ ವಾದಿಗೆ ಅರ್ಧ ಭಾಗ ಮತ್ತು ಬುಗಯ್ಯನ ಸಾಕು ಮಗಳು ಕಾಶಮ್ಮನವರಿಗೆ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ. ಸುಮಾರು 35-40 ವರ್ಷಗಳ ಹಿಂದೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಬುಗಯ್ಯ ತನಗೆ ಬಂದ ಜಮೀನಿನಲ್ಲಿ ಆತನಿಗೆ ಅರ್ಧ ಕಾಶಮ್ಮನಿಗೆ ಅರ್ಧ ಭಾಗ ಮಾಡಿದ್ದಾರೆ ಎಂದರೆ ಸರಿಯಲ್ಲ. ತನ್ನ ಭಾಗಕ್ಕೆ ಬಂದಿದ್ದ ಜಮೀನನ್ನು ಕಾಶಮ್ಮ 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 3ನೇ ಪ್ರತಿವಾದಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ ಮುಂಬೈಗೆ ಹೋಗಿದ್ದರು ಮತ್ತು ಆತ ಅವರ ಸಹೋದರ ಬುಗಯ್ಯನ ಜೊತೆ ಚೆನ್ನಾಗಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮುಂಬೈನಲ್ಲಿ ಸುಮಾರು 40 ವರ್ಷಗಳು ಇದ್ದರು.

ಬುಗಯ್ಯ ನಾರಯಣ ಪೇಟನಲ್ಲಿ ನಿಂಗಯ್ಯ ಮಹಾರಾಜ ರವರ ಮನೆಯಲ್ಲಿ ಸೇಂದಿ ಮಾರಾಟದ ವ್ಯವಹಾರ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಬುಗಯ್ಯ ನಾರಯಣಪೇಟನಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಬುಗಯ್ಯ ನ ಬಳಿಯಲ್ಲಿ ನಾಲ್ಕು ವರ್ಷ ಜಿತ ಮಾಡಿದ್ದೇನೆ . ನನ್ನ ನಂತರ ನನ್ನ ಮಗ ಕೂಡ ಬುಗಯ್ಯನ ಬಳಿ ಜಿತ ಮಾಡಿದ್ದಾರೆ. ಬುಗಯ್ಯ ನಾರಾಯಣ ಪೇಟನಲ್ಲಿ ವಾಸ ಇದ್ದು ಅಲ್ಲಿ ಕೃಷಿ ಮತ್ತು ಸಿಂದಿ ವ್ಯವಹಾರ ಮಾಡುತ್ತಾ ನಮ್ಮನೆಲ್ಲಾ ಜಿತಕ್ಕೆ ಇಟ್ಟು ಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಬುಗಯ್ಯನ ಬಳಿ ಗಂಗಾರಾವನ ಪಲ್ಲಿಯಲ್ಲಿ ಜಿತ ಮಾಡುತ್ತಿದ್ದೆ. ನನ್ನ ಜೊತೆ ಇನ್ನೂ 5 ಜನ ಜಿತದಾಳು ಇದ್ದರು. ಅವರುಗಳ ಹೆಸರು ಚಂದ್ರಪ್ಪ, ಬುಗಪ್ಪ, ನಾನು ಮತ್ತು ನನ್ನ ಮಗ ಇದ್ದೇವು. ನಾನು ಬಿಟ್ಟು ಬಂದ ನಂತರ ಯಾರು ಜಿತಕ್ಕೆ ಇದ್ದರು ನನಗೆ ಗೊತ್ತಿಲ್ಲ.

ಬುಗಯ್ಯನಿಗೆ 1ನೇ ಪ್ರತಿವಾದಿ ಮತ್ತು ಮಹಾದೇವಮ್ಮ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಬುಗಯ್ಯ ಮಹಾದೇವಮ್ಮನ ಹೆಸರಿನಲ್ಲಿ ಕೂಡಾ ಜಮೀನು ಖರೀದಿ

ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮಹಾದೇವಮ್ಮ ಗಂಗಾರಾಮನ ಪಲ್ಲಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆಲಸಕ್ಕೆ ಇದ್ದಾರೆ ಎನ್ನುತ್ತಾರೆ. ಬುಗಯ್ಯ ತನ್ನ ಮತ್ತು 1ನೇ ಪ್ರತಿವಾದಿ ಹೆಸರಿನಲ್ಲಿ ಎಷ್ಟು ಜಮೀನು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬುಗಯ್ಯ 2ನೇ ಹೆಂಡತಿ ಮಹಾದೇವಮ್ಮನ ಹೆಸರಿನಲ್ಲಿ ಕೂಡಾ ಖರೀದಿ ಮಾಡಿದ್ದು ಅದು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ.

ವಾದಿ ಮತ್ತು ಬುಗಯ್ಯನ ಮನೆ ದೂರದಲ್ಲಿವೆ ಎಂದರೆ ಸರಿ. ಅವರವರ ಮನೆ ವ್ಯವಹಾರ ಅವರೆ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ವಾದಿ ಕುಟುಂಬ ಎನ್ನುತ್ತಾರೆ. ವಾದಿಗೆ ಇಬ್ಬರು ಮಕ್ಕಳು. ಅವರ ಹೆಸರು ನರಸಮ್ಮ ಹಾಗೂ ಸತ್ಯಮ್ಮ. ನರಸಮ್ಮ ಬದುಕಿದ್ದಾರೆ ಎಂದರೆ ಸರಿ. ವಾದಿಯ ಮೊದಲ ಹೆಂಡತಿ ತವರು ಮನೆಯಲ್ಲಿದ್ದಾರೆ ಎಂದರೆ ಸರಿ .ಕಾಶಮ್ಮ ವಾದಿಯ ಮೊದಲ ಹೆಂಡತಿಯ ಮಗಳು ಎಂದರೆ ಸರಿ. ಬುಗಯ್ಯ ಅವರಿಗೆ ಮಕ್ಕಳು ಇಲ್ಲದ ಕಾರಣ ಕಾಶಮ್ಮನ ತಾಯಿ ಕಾಶಮ್ಮರವರನ್ನು ಬುಗಯ್ಯ ಮತ್ತು 1ನೇ ಪ್ರತಿವಾದಿರವರಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಕಾಶಮ್ಮನ ಮದುವೆಯನ್ನು ಬುಗಯ್ಯ ಮಾಡಿದ್ದಾರೆ ಎಂದರೆ ಸರಿ. ಬುಗಯ್ಯನ ಆಸ್ತಿಗಳಿಗೆ ಕಾಶಮ್ಮ ವಾರಸುದಾರಳು ಎಂದರೆ ಸರಿಯಲ್ಲ. ಬುಗಯ್ಯ ಮತ್ತು 1ನೇ ಪ್ರತಿವಾದಿ ಆಸ್ತಿಗಳಲ್ಲಿ ಕಾಶಮ್ಮ ಮತ್ತು ಮಹಾದೇವಮ್ಮ ಹಕ್ಕು ಹೊಂದಿದ್ದಾರೆ ಎಂದರೆ ಸರಿಯಲ್ಲ. ಬುಗಯ್ಯ, ಕಾಶಮ್ಮ ಮತ್ತು ಮಹಾದೇವಮ್ಮನ ಆಸ್ತಿಗಳಲ್ಲಿ ಕಾಶಮ್ಮ ಮತ್ತು ಅವರ ಮಗ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ.

ನಾನು ಬುಗಯ್ಯನ ಜೊತೆ ಜಗಳ ಮಾಡಿ ಜಿತ ಬಿಟ್ಟು ಬಂದಿದ್ದೆ ಎಂದರೆ ಸರಿಯಲ್ಲ. ಕಾರಣ ನಾನು ವಾದಿಗೆ ಅನುಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬುಗಯ್ಯನ ಆಸ್ತಿಗಳಿಗೆ ಕಾಶಮ್ಮ ಮಾಲಿಕರಾಗಿದ್ದಾರೆ ಎಂದರೆ ಸರಿಯಲ್ಲ. ಬುಗಯ್ಯ 1ನೇ ಪ್ರತಿವಾದಿ ಮತ್ತು ಮಹಾದೇವಮ್ಮರವರ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಅವರು ಖರೀದಿ ಮಾಡಿದ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಬುಗಯ್ಯ ಬದುಕಿರುವಾಗ ವಾದಿ ಯಾವುದೇ ಆಸ್ತಿಯಲ್ಲಿ ಭಾಗ ಕೇಳಿಲ್ಲ . ಬುಗಯ್ಯ ತೀರಿಕೊಂಡ ನಂತರ 1ಮತ್ತು 2ನೇ ಪ್ರತಿವಾದಿಯರಿಗೆ ಮತ್ತು ಮಹಾದೇವಮ್ಮನವರಿಗೆ ತೊಂದರೆ ಕೊಡುವ ಸಲುವಾಗಿ ವಾದಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ 2ನೇ ಹೆಂಡತಿ ಮತ್ತು ಮಕ್ಕಳ

ಒತ್ತಾಯದಿಂದ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಬುಗಯ್ಯ ಆಸ್ತಿಗಳಿಗೆ ವಾದಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(3ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**